SRI M. MOHAMMED ALI.—City service, not only in India, but all over the world is uneconomical. These losses have to be sustained by the Corporation and made good from some other divisions in the interest of the travelling public because the bulk of passengers who travel by these buses are factory employees, labourers and the student community to whom we have given thousands of passes at concessional rates.

SRI M S. KRISHNAN.—Now that the revenue has been increased after taking over of the contract carriage and that the revenue is likely to increase further, will the Government please consider revision of the fare structure in a downward manner and cancel the recent increase ?

SRI M MOHAMMED ALI.—As compared to the cost of operation, the increase in fare is only 50 per cent. Therefore I do not think there is any valid reason to consider the revision of fares downwards. What is being considered is to provide better amenities and service to the travelling public as also replacement of old vehicles.

Muzrai Lands in Tumkur Districs

129. SRI ANDANAIAH (Kunigal).—Will the Minister for Revenue be pleased to state:—

(*a*) since when the muzrai lands vest with the Government ;

(*b*) the number of applications received in Tumkur District for registration of occupancy right ;

(*c*) the number of applications disposed off ?

SRI N. HUTCHAMASTHY GOWDA (Minister for Revenue).—

(*v*) From 1-7-1970.

(*b*) 8,501 claim applications have been received upto 1-1-1976.

(*c*) 268, upto 1-1-1976.

ಶ್ರೀ ಅಂದಾನಯ್ಯ.—1-7-1970 ರಿಂದ 1-1-1976ರವರೆಗೆ 8,508 ಅನುಭೋಗದ ಅರ್ಜಿಗಳು ಬಂದಿವೆ ಎಂದು ಹೇಳಿದ್ದೀರಿ. ಇದರಲ್ಲಿ 268 ಅರ್ಜಿಗಳು ಇತ್ಯರ್ಥವಾಗಿವೆ ಎಂದು ಹೇಳಿದ್ದೀರಿ ಈಗಿರುವ ಸಿಬ್ಬಂದಿ ಕಡಿಮೆ ಇರುವುದರಿಂದ ಕೆಲಸಮಾಡುವುದಕ್ಕೆ ಆಗುವುದಿಲ್ಲ. ಇನ್ನೂ ಹೆಚ್ಚಿನ ಸಿಬ್ಬಂದಿ ಬೇಕಾಗುತ್ತದೆಂದು ಡೆಪ್ಯುಟಿ ಕಮಿಷನರ್‌ರವರಿಂದ ಏನಾದರೂ ಬೇಡಿಕೆ ಬರುತ್ತದೆಯೇ ?

†ಶ್ರೀ ಎನ್, ಹುಚ್ಚಮಾಸ್ತಿಗೌಡ.—ಬೇಡಿಕೆ ಬಂದಿರತಕ್ಕ ವಿಷಯ ನನ್ನ ಗಮನಕ್ಕೆ ಬಂದಿಲ್ಲ. ಡೆಪ್ಯುಟಿ ಕಮಿಷನರ್‌ರವರು ಏನು ಕೇಳಿದ್ದಾರೆನ್ನುವುದನ್ನು ಕೂಡಲೇ ವಿಚಾರಿಸಿ ಕ್ರಮ ತೆಗೆದು ಕೊಳ್ಳುತ್ತೇನೆ.

ಶ್ರೀ ಅಂದಾನಯ್ಯ.—8508 ಅರ್ಜಿಗಳ ಪೈಕಿ ಎಷ್ಟು ಜನ ಅರ್ಜಿದಾರರು ಹಾಕಿಕೊಂಡಿದ್ದಾರೆ. ಇದರಲ್ಲಿ ಇತರರು ಎಷ್ಟು ಜನ ಅರ್ಜಿ ಹಾಕಿಕೊಂಡಿದ್ದಾರೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ವಿವರ ನನ್ನಲ್ಲಿ ಇಲ್ಲ. ಒಟ್ಟು ಮೂರು ಜಿಲ್ಲೆಗಳು ಸೇರಿವೆ ಅವು ಯಾವುವೆಂದರೆ ಬೆಂಗಳೂರು ಇನಾಮ್ ಅಬಾಲಿಷನ್ ಡೆಪ್ಯುಟಿ ಕಮಿಷನರ್‌ಗೆ ತುಮಕೂರು, ಕೋರಾರ ಮತ್ತು ಬೆಂಗಳೂರು ಜಿಲ್ಲೆ ಇದರಲ್ಲಿ ಸೇರಿರುತ್ತದೆ. ಆದರಲ್ಲಿ ಇರತಕ್ಕ ಸಿಬ್ಬಂದಿ ಗೆಸಿಟೆಡ್ ಅಸಿಸ್ಟೆಂಟ್. ಅಂದರೆ ತಹಸೀಲ್‌ದಾರ್ ಗ್ರೇಡ್ ಅಸಿಸ್ಟೆಂಟ್ ಕೊಟ್ಟಿದೆ. ಒಬ್ಬರು ಸ್ಟೆನೋ ಗ್ರಾಫರ್, ಮೂರು ಜನ ಫಸ್ಟ್ ಡಿವಿಜನ್ ಕ್ಲಾರ್ಕ್ಸ್, ಮೂರು ಜನ ಸೆಕೆಂಡ್ ಡಿವಿಜನ್ ಕ್ಲಾರ್ಕ್ಸ್ ಸಿಬ್ಬಂದಿಯನ್ನು ಕೊಟ್ಟಿದೆ. ಈ ಸಿಬ್ಬಂದಿಯ ಜೊತೆಗೆ ಮಾನ್ಯ ಸದಸ್ಯರು ಕೇಳಿದಹಾಗೆ ಗೇಣಿ ದಾರರು ಯಾರು ಯಾರು ಗೇಣಿ ಮಾಡುತ್ತಾ ಇದ್ದಾರೆ ಅದನ್ನು ಸರ್ಕಾರದವರು ಹರಾಜುಮಾಡಿ ದೇವಸ್ಥಾನದ ಜಮೀನನ್ನು ಮಾಡುವವರಿಗೇನೆ ಕೊಟ್ಟಿದೆ. ಇತ್ತೀಚೆಗೆ ಕೊಟ್ಟಿರತಕ್ಕ ಅರ್ಜಿಕರ ಭೂಮಿಯನ್ನು ಸಾಗುಮಾಡುವವರಿದ್ದರೆ ಪ್ರತ್ಯೇಕವಾಗಿ ಅರ್ಜಿ ಕೊಟ್ಟಿರತಕ್ಕ ವಿವರ ನನ್ನ ಹತ್ತಿರವಿಲ್ಲ.

ಶ್ರೀ ಅಂದಾನಯ್ಯ.—8508 ಅರ್ಜಿಗಳ ಪೈಕಿ 268 ಅರ್ಜಿಗಳು ಇತ್ಯರ್ಥವಾಗಿವೆ ಎಂದು ಹೇಳಿರುತ್ತೀರಿ. ಆ ಕೆಲಸಗಳನ್ನು ಭೂಸುಧಾರಣೆ ಆಕ್ಟ್ ಕೆಳಗೆ ಇರುವ ನ್ಯಾಯಮಂಡಳಿಗಳಿಗೆ ಇತ್ಯರ್ಥ ಮಾಡುವ ಕೆಲಸವನ್ನು ವಹಿಸಲು ಆಲೋಚನೆ ಮಾಡಿದ್ದೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ವಿಷಯದಲ್ಲಿ ಸರ್ಕಾರ ಪೂರ್ಣವಾಗಿ ಪುನರ್ ಆಲೋಚನೆ ಮಾಡಬೇಕಾದ ಅಗತ್ಯವಿದೆ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮೂರು ಜಿಲ್ಲೆಗಳಲ್ಲಿ 27.304 ಅರ್ಜಿಗಳ ವಿಚಾರಗಳು ಚಾರಿಟಬಲ್ ಇನಾಮ್ ಅಬಾಲಿಷನ್ ಆಕ್ಟ್ ಕೆಳಗೆ ಬರತಕ್ಕ ಕಲಮುಗಳ ಅರ್ಜಿಗಳು ಇವೆ. ಮತ್ತೆ ಪರ್ಸನಲ್ ಎಮಲೆನ್ಸಿಯಸ್ ಇನಾಮ್ ಅಬಾಲಿಷನ್ ಆಕ್ಟ್ ಕೆಳಗೆ 347 ಅರ್ಜಿಗಳು ಇವೆ. ರೆವಿನ್ಯೂ ಅಪೆಲೆಟ್ ಟ್ರಿಬ್ಯುನಲ್‌ನಿಂದ ವಾಪಸ್ ಆಗಿರತಕ್ಕವು 810 ಅರ್ಜಿಗಳು ಇವೆ. ಈಗ ಇರತಕ್ಕ ಸ್ಥಿತಿಯಲ್ಲಿ ಒಂದು ತಿಂಗಳಿಗೆ 50 ಅರ್ಜಿಗಳಿಗೂ ಹೆಚ್ಚು ತೀರ್ಮಾನ ಮಾಡಲಕ್ಕೆ ಆಗುವುದಿಲ್ಲ ಎನ್ನುವುದು ಸ್ಪಷ್ಟವಾಗಿ ಗೊತ್ತಾಗಿದೆ. ಆದುದರಿಂದ ಕಾನೂನನ್ನು ಬದಲಾವಣೆ ಮಾಡುವುದು ಅವಶ್ಯಕವೆಂದು ಕಂಡುಬಂದರೆ ಕಾನೂನನ್ನು ಬದಲಾವಣೆ ಮಾಡಿ ಬೇಗ ತೀರ್ಮಾನ ಮಾಡಬೇಕೆಂದು ಸರ್ಕಾರದ ಅಪೇಕ್ಷೆಯಾಗಿರುತ್ತದೆ.

Minor Irrigation Tanks in Madhugiri Taluk

247. SRI R. CHIKKAIAH (Madhugiri).—Will the Minister of State for Minor Irrigation be pleased to state :—

(*a*) the number of minor irrigation tanks taken up for construction in Madhugiri Taluk ;

(*b*) the reasons for the delay in completing the work of these tanks ?

SRI S. B. NAGARAL (Minister of State for Minor Irrigation).—

(*a*) Ten.

(*b*) There was delay in one work for want of machinery and equipment.

ಶ್ರೀ ಆರ್. ಚಿಕ್ಕಯ್ಯ.—ತಮ್ಮ ಉತ್ತರದಲ್ಲಿ ಒಂದು ಕೆಲಸ ಮಾತ್ರ ಯಂತ್ರೋಪಕರಣಗಳು ಬೇಕಾಗಿರುವುದರಿಂದ ವಿಳಂಬವಾಗಿದೆ ಎಂದು ಹೇಳಿದ್ದೀರಿ. ಬಾಕಿ 9 ಕೆಲಸಗಳು ಪೂರ್ಣವಾಗಿವೆಯೇ ಎಂದು ಕೇಳುತ್ತಿದ್ದೇನೆ ?

ಶ್ರೀ ಎಸ್. ಬಿ. ನಾಗರಾಳ್.—ಉತ್ತರದಲ್ಲಿ ಒಂದು ಕೆಲಸ ವಿಳಂಬವಾಗಿದೆಯೆಂದು ಹೇಳಿಲ್ಲ.

ಶ್ರೀ ಆರ್. ಚಿಕ್ಕಯ್ಯ.—ಯಂತ್ರೋಪಕರಣಗಳು ಬೇಕಾಗಿರುವುದರಿಂದ ಎಂದು ಹೇಳಿದ್ದೀರಿ. ಕೆಲಸ ತೆಗೆದುಕೊಂಡು ಎಷ್ಟು ವರ್ಷಗಳಾಯಿತು ಎಂದು ಕೇಳುತ್ತಿದ್ದೇನೆ ?